| O.S 42/2010 | DW-1 |
|---|---|

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 16.08.2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು:- ವಾದಿ ಪರ ವಕೀಲರಾದಃ ಶ್ರೀ PR ರವರಿಂದ:-**

ನಾನು ಮೈಸೂರಿನ ಶಿಖಾ ಮೋಟಸ್ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು 2016ನೇ ಸಾಲಿನಲ್ಲಿ ನಿವೃತ್ತಿ ಆಗಿರುತ್ತೇನೆ. ನನ್ನ ತಂದೆ ನ್ಯಾಯಾಲಯದಲ್ಲಿ ಅಮೀನ್ ಕೆಲಸ ಮಾಡುತ್ತಿದ್ದರು. ನನ್ನ ತಂದೆ ಅಂದಾಜು 23 ವರ್ಷಗಳ ಹಿಂದೆ ನಿವೃತ್ತಿ ಆಗಿರುತ್ತಾರೆ. ನನ್ನ ತಂದೆ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದ ನ್ಯಾಯಾಲಯದಲ್ಲಿ ನಿವೃತ್ತಿ ಆಗಿರುತ್ತಾರೆ.

ನನ್ನ ತಂದೆ ನ್ಯಾಯಾಲಯದಲ್ಲಿ ಕೆಲಸಕ್ಕೆ ಸೇರಿಕೊಳ್ಳುವಾಗ ಎಲ್ಲಾ ಶಾಲಾ ದಾಖಲಾತಿಗಳನ್ನು ಕೊಟ್ಟಿರುತ್ತಾರೆಯೇ ಎಂದರೆ ಗೊತ್ತಿಲ್ಲ. ನನ್ನ ತಂದೆಯ ಶಾಲಾ ಅಂಕಪಟ್ಟಿ ಮತ್ತು ಶಾಲಾ ದಾಖಲಾತಿ ಗೊತ್ತಿಲ್ಲ. ನನ್ನ ತಂದೆ ಮೈಸೂರಿನ ಶಾರದ ವಿಳಾಸ ಶಾಲೆಯಲ್ಲಿ ಓದುತ್ತಿದ್ದರು. ನನ್ನ ತಂದೆಯ ತಂದೆಯ ಹೆಸರು ಬಸಪ್ಪ ಎಂದು ದಾಖಲಾತಿಗಳಲ್ಲಿ ಕೊಟ್ಟಿರುತ್ತಾರೆ. ನಾನು ನೋಡಿರುವುದಿಲ್ಲ. ನನ್ನ ತಂದೆ ಮೃತಪಟ್ಟ ನಂತರ ಪಿಂಚಣಿಯನ್ನು ನನ್ನ ತಾಯಿ ತೆಗೆದುಕೊಳ್ಳುತ್ತಿದ್ದರು.

ನನ್ನ ತಂದೆಯ ಪಿಂಚಣಿ ಬುಕ್ಕನ್ನು ನಾನು ನೋಡುತ್ತಿದ್ದೆ. ನನ್ನ ತಂದೆಯ ಪಿಂಚಣಿ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ತಂದೆಯ ತಾಯಿಯ ಪಿಂಚಣಿ ಪುಸ್ತಕವನ್ನು ಹಾಜರು ಮಾಡಿರುತ್ತೇನೆ. ಸದರಿ ಪಿಂಚಣಿ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಬ್ಯಾಂಕಿನಲ್ಲಿ ಕೊಟ್ಟಿದ್ದು ಪ್ರಸ್ತುತ ನನ್ನ ತಾಯಿ ಪಿಂಚಣಿ ಯನ್ನು ಪಡೆಯುತ್ತಿದ್ದಾರೆ.

ನನ್ನ ತಾಯಿ ಪಿಂಚಣಿ ಪಡೆಯುತ್ತಿರುವ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇರುವುದಿಲ್ಲ. ನನ್ನ ತಂದೆ ಬದುಕಿದ್ದಾಗ ಆಧಾರ್ ಕಾರ್ಡನ್ನು ಮಾಡಿಸಿರುತ್ತಾರೆ. ಸದರಿ ಆಧಾರ್ ಕಾರ್ಡನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇರುವುದಿಲ್ಲ. ಸದರಿ ಆಧಾರ್ ಕಾರ್ಡನಲ್ಲಿ ನನ್ನ ತಂದೆ ಯ ತಂದೆಯ ಹೆಸರು ಬಸಪ್ಪ ಎಂದು ನಮೂದಾಗಿರುತ್ತದೆ. ನನ್ನ ತಂದೆಯ ಆಧಾರ್ ಕಾರ್ಡನಲ್ಲಿ ಮತ್ತು ನನ್ನ ತಂದೆಯ

ಪಿಂಚಣಿ ಪುಸ್ತಕದಲ್ಲಿ ನನ್ನ ತಂದೆಯ ತಂದೆಯ ಹೆಸರು ಬಸಪ್ಪ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಯ ತಂದೆಯ ಹೆಸರು ಬಸಪ್ಪ ಎಂದು ನಮೂದಾಗದೇ ಇರುವ ಕಾರಣ ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು ಮೈಸೂರಿನಲ್ಲಿ ಜನನವಾಗಿರುತ್ತದೆ. ಈ ದಾವೆ ಹೂಡಿದ ನಂತರ ನನಗೆ ವಾದಿ ಗೊತ್ತಿರುತ್ತಾರೆ. ವಾದಿಯು ಆಲ್ದೂರು ಗ್ರಾಮ ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರಕ್ಕೆ ಸೇರಿರುತ್ತಾರೆ ಎಂದರೆ ಸರಿಯಲ್ಲ.

ವಾದಿಯ ತಂದೆಯ ಹೆಸರು ಬಸಪ್ಪ ಎಂಬುವ ವಿಚಾರ ನನಗೂ ಮತ್ತು ನನ್ನ ತಂದೆಗೂ ಗೊತ್ತಿತ್ತು ಎಂದರೆ ಸರಿಯಲ್ಲ. ವಾದಿಯ ತಂದೆ ಬಸಪ್ಪ ಆಲ್ದೂರು ಗ್ರಾಮಕ್ಕೆ ಸೇರಿರುತ್ತಾರೆ ಎಂದರೆ ಸರಿ. ವಾದಿಯ ತಂದೆ ಆಲ್ದೂರು ಗ್ರಾಮಕ್ಕೆ ಸೇರಿದ್ದು ಸರ್ಕಾರಿ ನೌಕರಿ ಪೊಲೀಸ್ ಇಲಾಖೆಯ ಕೆಲಸಕ್ಕೆ ಸೇರಿದ್ದರು ಎಂದರೆ ನಿಜ.

ವಾದಿಯು ಶುರುವಿನಲ್ಲಿ 1 ರಿಂದ 3ನೇ ಪ್ರತಿವಾದಿಯರ ವಿರುದ್ಧ ಮಾತ್ರ ಭೋಗ್ಯ ತೀರುವಳಿಗಾಗಿ ದಾವೆಯನ್ನು ಹೂಡಿದ್ದರು ಎಂದರೆ ನಿಜ. ಸದರಿ ಭೋಗ್ಯ ತೀರುವಳಿ ದಾವೆ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯ ತಂದೆಯ ಹೆಸರು ಆಲ್ದೂರು ಬಸಪ್ಪ ಎಂದರೆ ಸರಿಯಲ್ಲ.

ಆಲ್ದೂರು ಬಸಪ್ಪ ಮತ್ತು ಮೈಸೂರು ಬಸಪ್ಪ ಬೇರೆ ಬೇರೆ ವ್ಯಕ್ತಿಗಳಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ತಂದೆ ಬಸಪ್ಪ ರವರಿಗೂ ನನ್ನ ತಂದೆಯ ತಂದೆ ಬಸಪ್ಪ ರವರಿಗೂ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಬಸಪ್ಪ ರವರ ತಮ್ಮ ಸಿದ್ಧರಾಜಪ್ಪ ನನಗೆ ಗೊತ್ತು.

ದಿನಾಂಕ 01.11.1943 ರಲ್ಲಿ ಸಿದ್ದರಾಜಪ್ಪ ರವರು ದಾವಾ ಆಸ್ತಿಯನ್ನು ಭೋಗ್ಯಕ್ಕೆ ಕೊಟ್ಟಿದ್ದರು ಎಂದರೆ ನಿಜ. ಸಿದ್ದರಾಜಪ್ಪನವರು ಬದುಕಿದ್ದಾಗ ವಾದಿಯ ತಂದೆ ಬಸಪ್ಪ ಆಸ್ತಿಯನ್ನು ಬಿಡುಗಡೆ ಮಾಡಿಕೊಳ್ಳಲು ಸಾಧ್ಯವಾಗದೇ ಇದ್ದ ಕಾರಣ ಅವರು ಮೃತಪಟ್ಟ ನಂತರ

ಈ ದಾವೆಯ 1 ರಿಂದ 3ನೇ ಪ್ರತಿವಾದಿಯರ ವಿರುದ್ಧ ಭೋಗ್ಯದ ಆಸ್ತಿಯನ್ನು ಬಿಡುಗಡೆ ಮಾಡಿಕೊಳ್ಳಲು ದೂರು ದಾಖಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

1971 ನೇ ಸಾಲಿನಲ್ಲಿ ನನ್ನ ತಂದೆ ಶಿವಣ್ಣರವರು ಸಿದ್ದರಾಜಪ್ಪ ರವರ ಹೆಂಡತಿ ಮತ್ತು ಮಗನಾದ ಮಹದೇವಪ್ಪನಿಂದ ಭೋಗ್ಯ ತೀರುವಳಿ ಮಾಡಿಕೊಂಡಿರುತ್ತಾರೆ. ಸದರಿ ಭೋಗ್ಯ ತೀರುವಳಿ ಕರಾರು ನೋಂದಣಿ ಆಗಿರುವುದಿಲ್ಲ. ಭೋಗ್ಯದ ಪತ್ರದ ಮೇಲೆ ತೀರುವಳಿ ಆಗಿರುತ್ತದೆ ಎಂದು ಒಕ್ಕಣೆ ಬರೆದು ಸಹಿ ಮಾಡಿರುತ್ತಾರೆ. ಅಸಲು ಭೋಗ್ಯ ತೀರುವಳಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇವೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯಾವಕಶವನ್ನು ಕೋರಿದ್ದರಿಂದ ಆಲಿಸಿ ನೀಡಲಾಯಿತು)

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.